4) ಸಂಧ್ಯಾ ಸುರಕ್ಷಾ ವೇತನ:

ಅ) ವಯಸ್ಸು ಮಿತಿಗಿಂತ ಕಡಿಮೆ ಇದ್ದಲ್ಲಿ

ಆ) ನಿಗದಿತ ಆದಾಯ ಮಿತಿಗಿಂತ ಹೆಚ್ಚಾಗಿದ್ದರೆ

ಇ) ದೊಡ್ಡ ಹಿಡುವಳಿದಾರರಾಗಿದ್ದರೆ

ಈ) ಮರಣ ಹೊಂದಿದ್ದರೆ

(ಇ) ಚಿಕ್ಕೋಡಿ ತಾಲ್ಲೂಕಿನಲ್ಲಿ ಗುರುತಿಸಿರುವ ಅನರ್ಹ ಫಲಾನುಭವಿಗಳ ವಿವರ

ಕ್ರ.ಸಂ.	ಯೋಜನೆ	ಅನರ್ಹಗೊಳಿಸಿದ ಫಲಾನುಭವಿಗಳ ಸಂಖ್ಯೆ
1	QAP	3350
2	PHP	2280
3	DWP	1564
4	SSY	6536
	ಒಟ್ಟು	13730

(ಈ) ಇಂತಹ ಪ್ರಕರಣಗಳು ಇದುವರೆಗೆ ಕಂಡು ಬಂದಿರುವುದಿಲ್ಲ.

(ಉ) ಅನ್ವಯಿಸುವುದಿಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರ

559 (32) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ):- ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ-ಸದಲಗ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆಯೇ; ಈ ಕೇಂದ್ರಗಳಲ್ಲಿ ಅವಶ್ಯ ಸಿಬ್ಬಂದಿಗಳಿದ್ದಾರೆಯೇ; ಇಲ್ಲದಿದ್ದಲ್ಲಿ, ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು.

ಆ) ಚಿಕ್ಕೋಡಿ-ಸದಲಗ ಕ್ಷೇತ್ರ ವ್ಯಾಪ್ತಿಯ ಇಂಗಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಯಾವಾಗ ಮಂಜೂರಾತಿ ನೀಡಲಾಯಿತು; ಆ ಸಮಯದಲ್ಲಿ ಒಟ್ಟು ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಸರ್ಕಾರವು ಮಂಜೂರಾತಿ ನೀಡಿತ್ತು; ಇವುಗಳೆಲ್ಲವನ್ನು ಪ್ರಾರಂಭಿಸಲು ಸರ್ಕಾರವು ಅನುಮತಿ ನೀಡಿದೆಯೇ;

(ಇ) ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ ನೀಡುವಾಗ ಗ್ರಾಮಸ್ಥರಿಗೆ ವಿಧಿಸುವ ಷರತ್ತುಗಳೇನು; ಈ ಇಂಗಳಿ ಗ್ರಾಮದ ಗ್ರಾಮಸ್ಥರು ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆಗೆ ಬೇಕಾದ ಅವಶ್ಯ ಷರತ್ತುಗಳನ್ನು ಪೂರೈಸಿದ್ದು ಯಾವಾಗ;

(ಈ) ಎಲ್ಲಾ ಷರತ್ತುಗಳನ್ನು ಪೂರೈಸಿದ್ದರೂ ಇಂಗಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸಲು ಇಷ್ಟೊಂದು ವಿಳಂಬವಾಗಿ ಅನುಮತಿ ನೀಡಲು ಕಾರಣವೇನು (ವಿವರ ನೀಡುವುದು)?

ಶ್ರೀ ಡಿ.ವಿ. ಸದಾನಂದಗೌಡ: (ಮಾನ್ಯ ಮುಖ್ಯಮಂತ್ರಿಗಳು)

(ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ಸದಲಗ ವ್ಯಾಪ್ತಿಯಲ್ಲಿ 6 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಈ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು ವಿವಿಧ ವೃಂದಗಳ 99 ಸಿಬ್ಬಂದಿ ಹುದ್ದೆಗಳು ಮಂಜೂರಾಗಿದ್ದು, 72 ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ 27 ಹುದ್ದೆಗಳು ಖಾಲಿಯಿವೆ.

ಅವಶ್ಯ ಸಿಬ್ಬಂದಿ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳು ಕೆಳಕಂಡಂತಿವೆ:

ಪ್ರಸ್ತುತ 735 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹಾಗು 314 ಕಿರಿಯ ಆರೋಗ್ಯ ಪುರುಷ ಸಹಾಯಕರ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿ ಮೂಲಕ ಭರ್ತಿ ಮಾಡಲು ಮೇ 2011 ರಂದು ಅರ್ಜಿಗಳನ್ನು ಆಹ್ವಾನಿಸಲು, ಆಯ್ಕೆ ಪ್ರಕ್ರಿಯೆ ಜಾರಿಯಲ್ಲಿದೆ.

ಇಲಾಖೆಯಲ್ಲಿ ಖಾಲಿಯಿರುವ 4067 ಗ್ರೂಪ್–ಡಿ ಹುದ್ದೆಗಳ ಪೈಕಿ 2323 ಹುದ್ದೆಗಳನ್ನು ಭರ್ತಿ ಮಾಡಲು ಇತ್ತೀಚೆಗೆ ಮಂಜೂರಾತಿ ನೀಡಲಾಗಿದೆ.

224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬುವ ಪ್ರಕ್ರಿಯೆಯು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಜಾರಿಯಲ್ಲಿದೆ.

ಆ) ಚಿಕ್ಕೋಡಿ–ಸದಲಗ ಕ್ಷೇತ್ರ ವ್ಯಾಪ್ತಿಯಲ್ಲಿನ ಇಂಗಳಿ ಗ್ರಾಮಕ್ಕೆ ದಿನಾಂಕ: 31.03.1997ರ ಸರ್ಕಾರದ ಆದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಷರತ್ತುಬದ್ಧ

ಮಂಜೂರಾತಿಯನ್ನು ನೀಡಲಾಗಿತ್ತು. ಆ ಸಮಯದಲ್ಲಿ ಇಂಗಳಿ ಸೇರಿದಂತೆ ಒಟ್ಟು 92 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಸರ್ಕಾರವು ಮಂಜೂರಾತಿ ನೀಡಿತ್ತು. ಅವುಗಳೆಲ್ಲವನ್ನೂ ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

ಇ) ಸ್ಥಳೀಯರು ₹ 1 ಲಕ್ಷ ವಂತಿಕೆ ಪಾವತಿಸುವುದು ಸೇರಿದಂತೆ, 2 ಎಕರೆ ಉಚಿತ ನಿವೇಶನ ಹಾಗೂ ಉಚಿತ ತಾತ್ಕಾಲಿಕ ಕಟ್ಟಡವನ್ನು ನೀಡಬೇಕೆಂದು ಷರತ್ತುಗಳನ್ನು ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಂಜೂರಾತಿ ನೀಡುವಾಗ ಸರ್ಕಾರವು ವಿಧಿಸುತ್ತಿದೆ.

ಇಂಗಳಿ ಗ್ರಾಮದ ಗ್ರಾಮಸ್ಥರು 2 ಎಕರೆ ಉಚಿತ ಜಮೀನು ಹಾಗೂ ರೂ.1 ಲಕ್ಷ ವಂತಿಕೆಯನ್ನು ದಿನಾಂಕ: 1-10-2008 ರಂದು ಮತ್ತು ಇಂಗಳಿ ಗ್ರಾಮ ಪಂಚಾಯಿತಿಯವರು ಉಚಿತ ತಾತ್ಕಾಲಿಕ ಕಟ್ಟಡವನ್ನು ದಿನಾಂಕ: 19-07-2010 ರಂದು ನೀಡಿದ್ದಾರೆ.

(ಈ) ಇಂಗಳಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಲು ಅನುಮತಿ ನೀಡಬೇಕೆಂದು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರಿಂದ ದಿನಾಂಕ: 17-08-2009 ರಂದು ಪ್ರಸ್ತಾವನೆ ಸ್ವೀಕರಿಸಲಾಗಿತ್ತು. ತದನಂತರ ಈ ಬಗ್ಗೆ ಹೆಚ್ಚುವರಿ ಮಾಹಿತಿ ನೀಡಲು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರನ್ನು ಕೋರಲಾಗಿತ್ತು. ತದನಂತರ ದಿನಾಂಕ: 15-12-2010 ರಂದು ಈ ಬಗ್ಗೆ ನಿರ್ದೇಶಕರಿಂದ ಮಂಜೂರಾತಿ ಆದೇಶ ಕೋರಿ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿತ್ತು. ಸದರಿ ಮಂಜೂರಾತಿ ನೀಡಲು ಕಾರಣಾಂತರಗಳಿಂದ ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಅಂತಿಮವಾಗಿ ದಿನಾಂಕ: 6-09-2011 ರಂದು ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಗಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗು ಸಮುದಾಯ ಆರೋಗ್ಯ ಕೇಂದ್ರದಲ್ಲಿ 'ಡಿ' ದರ್ಜೆ & ಪುರವಣ ನೇಮಕಾತಿ

560 (878) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ):- ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಮೂದಾಯ ಆರೋಗ್ಯ ಕೇಂದ್ರಗಳಿವೆ; ಈ ಆರೋಗ್ಯ ಕೇಂದ್ರಗಳಲ್ಲಿ ಎಷ್ಟು 'ಡಿ' ದರ್ಜೆಯ ಹಾಗೂ ವಾಹನ ಚಾಲಕರ ಹುದ್ದೆಗಳು ಖಾಲಿ ಇವೆ; ಈ ಹುದ್ದೆಗಳು